ಗುಂಡಿಬಿದ್ದ ಟಾರು ರಸ್ತೆಯಲ್ಲಿ ಮಳೆ ನೀರನ್ನು ಸೀಳಿಕೊಂಡು ಕಾರು ಹೊರಟಿತು. ಪೈಮಾಮ್ ಒಮ್ಮೆ ಕತ್ತು ತಿರುಗಿಸಿ ನೋಡಿದರು. ಪತ್ನಿಯ ಕಣ್ಣಂಚಿನಲ್ಲಿ ನೀರು ಒಸರುತ್ತಿತ್ತು. ಮಕ್ಕಳು ಮಾತೇ ಮರೆತಂತೆ ಕುಳಿತಿದ್ದರು. ಅವರ ಮುಖ ನೋಡಲಾಗದೆ ಪೈಮಾಮ್ ಕಿಟಕಿಯಾಚೆ ಕಣ್ಣು ಹಾಯಿಸಿದರು. ವಿಶಾಲ ಭತ್ತದ ಗದ್ದೆಗಳು ಹಸಿರುಹಸಿರಾಗಿ ಹೊಸ ವಿಶ್ವಾಸ ತುಂಬುವಂತೆ ಕಂಡವು.

ಕಾರು ಹೆದ್ದಾರಿಯ ಚೌಕಿ ತಲುಪಿತು. ಅದಾಗಲೇ ಅಲ್ಲಿ ಮಂಗಳೂರಿನಿಂದ ಮುಂಬಯಿಗೆ ಹೋಗುವ ಪಿಂಟೊ ಎಕ್ಸ್‌ಪ್ರೆಸ್ ಕಾಯುತ್ತ ನಿಂತಿತ್ತು. ಪೈ ಕುಟುಂಬ ಮಲಯಾಳಿಯ ಕಾರಿನಿಂದ ಇಳಿದು ಬಸ್ ಏರಿತು. ಬಸ್ ನಿಧಾನಕ್ಕೆ ಮುಂದಕ್ಕೆ ಚಲಿಸುತ್ತಿದ್ದಂತೆ ಮಲಯಾಳಿ ಕಿಟಕಿ ಬಳಿ ಓಡಿ ಬಂದು ನಗುತ್ತ ಕೈ ಬೀಸಿದ. ಪೈಮಾಮ್ ನಿಧಾನವಾಗಿ ಕೈ ಬೀಸಿದರು. ತೇವಗೊಂಡಿದ್ದ ಅವರ ಕಣ್ಣಿಗೆ ಮಲಯಾಳಿಯ ಮುಖ ಮಬ್ಬುಮಬ್ಬಾಗಿ ಗೋಚರಿಸಿತು...

★★★

ಪೈಮಾಮ್ ಮನೆ, ಥಿಯೇಟರ್, ಫ್ಯಾಕ್ಟರಿ, ಸ್ವಲ್ಪ ಜಮೀನು ಎಲ್ಲವನ್ನೂ ಮಲಯಾಳಿಗೆ ಮಾರಿ ಬೊಂಬಾಯಿಗೆ ಹೊರಟರಂತೆ ಎಂಬ ಸುದ್ದಿ ಕೇಳಿದ ಊರವರೆಲ್ಲ, ಅಯ್ಯೊ ಪಾಪ! ಯಾವುದೂ ಬರಕತ್ತಾಗಲಿಲ್ಲ... ಇನ್ನೇನು ಮಾಡ್ಲಿಕಾಗ್ತದೆ ಪಾಪ... ಎಂದು ಬಾಯಿಮಾತಿನ ಕರುಣೆ ತೋರಿದರು. ಇನ್ನು ಕೆಲವರು, ಮಲಯಾಳಿಯ ಯೋಗ ನೋಡಿ ಮಾರಾಯರೆ ಎಂದು ಬೆರಗುಪಟ್ಟರು.

ಈ ಮಲಯಾಳಿ ಕೇರಳ ಕಡೆಯ ಅನಾಥ ಹುಡುಗ. ಹತ್ತು ವರ್ಷದವನಿದ್ದಾಗ ಈ ಊರಿಗೆ ಬಂದು ಮಲಬಾರ್ ಬೇಕರಿಯಲ್ಲಿ ಪಾತ್ರೆ ತೊಳೆಯುವ ಕೆಲಸಕ್ಕೆ ಸೇರಿಕೊಂಡಿದ್ದ. ಎರಡು ಹೊತ್ತಿನ ಕೂಳು ಸಿಗುತ್ತಿದ್ದುದೇ ಈತನ ಪಾಲಿಗೆ ಸೌಭಾಗ್ಯವಾಗಿತ್ತು. ರಾತ್ರಿ ಬೇಕರಿಯ ಹೊರಗೆ ಗೋಣಿಚೀಲ ಹಾಸಿಕೊಂಡು ಮಲಗುತ್ತಿದ್ದ. ಅವನ ಜತೆ ಒಂದಿಷ್ಟು ಬೀದಿ ನಾಯಿಗಳೂ ಸಂಗಾತಿಗಳಂತೆ ಮಲಗುತ್ತಿದ್ದವು.

ಅದೊಂದು ದಿನ ರಸ್ಕ್ ತುಂಬಿಡುವ ಗಾಜಿನ ಪಾತ್ರೆ ಒರೆಸುವಾಗ ಕೈತಪ್ಪಿ ಚೂರುಚೂರಾಯಿತು. ವ್ಯಘ್ರಗೊಂಡ ಬೇಕರಿ ಮಾಲೀಕ ಬಿಸಿ ಎಣ್ಣೆಯನ್ನು ಈತನ ಮೈಮೇಲೆ ಎರಚಿದ. ಮಲಯಾಳಂ ಬಿಟ್ಟು ಬೇರಾವ ಭಾಷೆ ಅರಿಯದ ಅಮಾಯಕ ಬಾಲಕ ಮೂಕನಂತೆ ರೋದಿಸತೊಡಗಿದ. ದಯನೀಯ ಸ್ಥಿತಿಯಲ್ಲಿದ್ದ ಬಾಲಕನನ್ನು ಪೈಮಾಮ್ ತಮ್ಮ ಮನೆಗೆ ಕರೆದೊಯ್ದು ಉಪಚರಿಸಿದರು. ತಮ್ಮ ಬಟ್ಟೆ ಅಂಗಡಿ ಪಕ್ಕದಲ್ಲೇ ಆತನಿಗೆ ಚಿಕ್ಕದೊಂದು ಬೀಡಾ ಅಂಗಡಿ ಹಾಕಿಕೊಟ್ಟರು.

ಚುರುಕಾಗಿದ್ದ ಹುಡುಗ ಬಲುಬೇಗ ಕನ್ನಡ, ಕೊಂಕಣಿ, ನವಾಯತ ಭಾಷೆಗಳನ್ನು ಕಲಿತು ಊರ ಜನರಲ್ಲಿ ಒಂದಾಗಿಬಿಟ್ಟ. ಸುತ್ತಮುತ್ತಲಿನ ಅಂಗಡಿ ಮಾಲೀಕರು ಆತನಿಂದ ಸಣ್ಣಪುಟ್ಟ ಕೆಲಸಗಳನ್ನು ಮಾಡಿಸಿಕೊಳ್ಳುತ್ತ ಚೂರುಪಾರು ಕಾಸು ಕೊಡುತ್ತಿದ್ದರು. ''ಏಯ್ ಮಲಯಾಳಿ ಇದೊಂದು ಮೂಟೆ ಗೋದಾಮಲ್ಲಿ ಇಟ್ಟು ಬಾರೊ, ಏಯ್ ಮಲಯಾಳಿ ಇದೊಂದಿಷ್ಟು ಕಾಯಿ ಸುಲಿದು ಕೊಡೊ'' ಎಂದು ಯಾರೇ ಹೇಳಿದರೂ, ''ಹಾಂ ಅನ್ನಾ... ಹೂಂ ಅನ್ನಾ'' ಎಂದು ನಗುಮೊಗದಿಂದ ವಿನಮ್ರತೆ ತೋರುತ್ತಿದ್ದ.

ಊರಲ್ಲಿ ಹೈಸ್ಕೂಲು, ಕಾಲೇಜು ಮಕ್ಕಳು ಹೆಚ್ಚುತ್ತಿದ್ದಂತೆ ದಿನಪತ್ರಿಕೆ, ವಾರಪತ್ರಿಕೆಗಳ ಏಜೆನ್ಸಿ ಪಡೆದ. ರತಿ ವಿಜ್ಞಾನ, ಚಕೋರಿಯಂಥ ಕೈಪಿಡಿಗಳನ್ನು ಪಡ್ಡೆ ಹುಡುಗರಿಗೆ ಕದ್ದುಮುಚ್ಚಿ ಕೊಟ್ಟ. ಬೆಳಗಾವಿ ಕಡೆಯಿಂದ ತರಕಾರಿ ತರಿಸಿದ. ಬರೀ ಬೆಂಡೆ ಕಾಯಿ, ನುಗ್ಗೆಕಾಯಿ, ಕುಂಬಳಕಾಯಿಗಳನ್ನೇ ತಿನ್ನುತ್ತಿದ್ದ ಹಳ್ಳಿಗರಿಗೆ ಟೊಮೆಟೊ, ಕಾಲಿ ಫ್ಲವರ್, ಕ್ಯಾಬೇಜ್, ಬೀನ್ಸ್‌ಗಳ ರುಚಿ ತೋರಿಸಿ ದುಡ್ಡು ಮಾಡಿದ. ಪಕ್ಕದಲ್ಲೇ ಕೋಳಿ ಮಾಂಸದ ಅಂಗಡಿಯನ್ನೂ ತೆರೆದ. ಊರಲ್ಲಿ ಹಸು ಸಾಕುವವರ ಸಂಖ್ಯೆ ಕಡಿಮೆಯಾಗುತ್ತಿರುವುದನ್ನು ಗ್ರಹಿಸಿ ಹಾಲಿನ ಪ್ಯಾಕೆಟ್ ಮನೆ ಬಾಗಿಲಿಗೆ ತಲುಪಿಸಿದ. ಊರ